ದಿನಾಂಕಃ 04.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ-

02. ಚಾಸಾ.1 ಗೊತ್ತು. ನಾನು, ಚಾಸಾ.1 ಮತ್ತು ಚಾಸಾ.7 ಸೇರಿ ಚಾಸಾ.3 ರವರ ಬಾಬ್ತು ಶ್ರೀರಾಮ ಎಜೆನ್ಸಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆವು. ಮೃತ 3 ನೇ ಆರೋಪಿ ಚಂದ್ರು ಸಿಂಗ್ ನಾವು ಕೆಲಸ ಮಾಡುತ್ತಿದ್ದ ಸಂಸ್ಥೆಯ ವಾಹನ ಚಾಲಕರಾಗಿದ್ದರು. ಚಾಸಾ.1 ನಮ್ಮ ಸಂಸ್ಥೆಯ ಕ್ಯಾಶಿಯರಾಗಿದ್ದರು.

03. ನಾನು ಈ ಪ್ರಕರಣದ ಘಟನೆ ನಡೆಯುವ ಆರು ತಿಂಗಳ ಮೊದಲಿನಿಂದಲೂ ಶ್ರೀರಾಮ ಎಜೆನ್ಸಿಯಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದೆನು.

04. ಆಗಸ್ಟ 2015 ರಲ್ಲಿ ನಾವು ಆಲ್ದೂರು, ಬಾಳೆಹೊನ್ನೂರು, ಜಯಪುರ ಮತ್ತು ಶೃಂಗೇರಿ ಮಾರ್ಗವಾಗಿ ನಮ್ಮ ಸಂಸ್ಥೆಯ ಸಾಮಾನುಗಳು ಸರಬರಾಜ ಮಾಡಲು ಸಂಸ್ಥೆಯ ಗುಡ್ಸ ವಾಹನದಲ್ಲಿ ಹೋಗಿದ್ದೆವು.

05. ಸಾಮಾನುಗಳನ್ನು ಸರಬರಾಜು ಮಾಡುತ್ತಾ ಮಧ್ಯಾಹ್ನ 2.00 ಗಂಟೆ ಸಮಯಕ್ಕೆ ಬಾಳೆಹೊನ್ನೂರಿಗೆ ಬಂದು ಸಾಮಾನುಗಳ ಸರಬರಾಜಿನಿಂದ ಬಂದ ಮೊತ್ತದ ಪೈಕಿ ರೂ. ಒಂದು ಲಕ್ಷವನ್ನು ಚಾಸಾ.3 ರವರ ಖಾತೆಗೆ ಚಾಸಾ.1 ರವರು ಜಮಾ ಮಾಡಿದರು.

06. ನಂತರ ನಾವು ಅಲ್ಲಿಂದ ಜಯಪುರ ಶೃಂಗೇರಿ ಮಾರ್ಗವಾಗಿ ಸಾಮಾನು ಸರಬರಾಜು ಮಾಡಿಕೊಂಡು ಜೇನುಗದ್ದೆಗೆ ಬಂದು ರಾತ್ರಿ 11.00 ಗಂಟೆ ಸಮಯಕ್ಕೆ ಊಟ ಮಾಡಿದೆವು. ನಾವು ಅಲ್ಲಂದ ಆಲ್ದೂರು ಮಾರ್ಗವಾಗಿ ಕೂದುವಳ್ಳಿ ಗ್ರಾಮಕ್ಕೆ ಬಂದೆವು. ಆ ಸಮಯದಲ್ಲಿ ಮೃತ 3 ನೇ ಆರೋಪಿ ನಮ್ಮ ವಾಹನದ ಚಾಲಕನಾಗಿದ್ದ. ಕೂದುವಳ್ಳಿ ಗ್ರಾಮದ ಬಳಿ ಹೋಗುತ್ತಿದ್ದಾಗ ಮೂವರು ವ್ಯಕ್ತಿಗಳನ್ನು ನಮ್ಮ ಗೂಡ್ಸ ವಾಹನವನ್ನು ಪಲ್ಸರ್ ದ್ವಿಚಕ್ರವಾಹನದಲ್ಲಿ

ಹಿಂಬಾಲಿಸಿಕೊಂಡು ಬಂದರು. ನಮ್ಮ ವಾಹನದ ಮುಂದಿನ ಗ್ಲಾಸಿಗೆ ಮೊಟ್ಟೆ ಹೊಡೆದರು. ನಾವು ಗಾಡಿ ನಿಲ್ಲಿಸಿದೆವು. ಆಗ ಬೈಕಿನಲ್ಲಿದ್ದವರ ಪೈಕಿ ಒಬ್ಬ ನಮ್ಮ ವಾಹನದ ಎಡಭಾಗಕ್ಕೆ ಬಂದು ಕತ್ತಿಯಿಂದ ನಮ್ಮ ವಾಹನದ ಎಡಭಾಗದ ಗಾಜು ಒಡೆದ. ನಮ್ಮ ವಾಹನದ ಎಡಭಾಗದಲ್ಲಿ ಚಾಸಾ.1 ರವರು ಕುಳಿತಿದ್ದರು. ಆತ ಕತ್ತಿಯಿಂದ ಚಾಸಾ.1 ರವರ ಮೇಲೆ ಹಲ್ಲೆ ಮಾಡಿದ್ದರಿಂದ ಚಾಸಾ.1 ರವರ ಎಡಗೈಗೆ ಪೆಟ್ಟಾಯಿತು.

07. ಒಬ್ಬ ವ್ಯಕ್ತಿ ಬೈಕಿನಲ್ಲಿದ್ದ. ಇನ್ನೊಬ್ಬ ವ್ಯಕ್ತಿ ನಮ್ಮ ವಾಹನದ ಚಾಲಕನ ಕಡೆಗೆ ಬಂದು ಚಾಕು ಹಿಡಿದು ಚಾಲಕನಾದ ಮೃತ 3 ನೇ ಆರೋಪಿಗೆ ಹೆದರಿಸಿದ. ಚಾಸಾ.1 ರವರ ಬಳಿ ಇದ್ದ ಕ್ಯಾಶ್ ಬ್ಯಾಗನ್ನು ಕಿತ್ತುಕೊಂಡು ಅವರು ಚಿಕ್ಕಮಗಳೂರು ಕಡೆಗೆಹೋರಟಹೋದರು. ಚಾಸಾ.1 ರವರ ಬ್ಯಾಗಿನಲ್ಲಿ ಸುಮಾರು ಮೂರು ಲಕ್ಷ ಹಣ ಸಾಮಾನು ಸರಬರಾಜು ಮಾಡಿ ಸಂಗ್ರಹಿಸಿದ್ದು ಇತ್ತು. ನಾವು ಈ ವಿಚಾರವನ್ನು ಚಾಸಾ.3 ರವರಿಗೆ ತಿಳಿಸಿದೆವು.

08. ಚಾಸಾ.3 ರವರು ನಮಗೆ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಲು ಹೇಳಿದರು. ಚಾಸಾ.1 ರವರು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು. ನಂತರ ನಾವು ಆಸ್ಪತ್ರೆಯಿಂದ ಚಿಕ್ಕಮಗಳೂರು ನಗರ ಠಾಣೆಗೆ ದೂರು ಸಲ್ಲಿಸಲು ಹೋದೆವು. ಚಿಕ್ಕಮಗಳೂರು ನಗರ ಪೋಲೀಸರು ಆಲ್ದೂರು ಠಾಣೆಯಲ್ಲಿ ದೂರು ಸಲ್ಲಿಸಲು ಹೇಳಿದ್ದರಿಂದ ನಾವು ಆಲ್ದೂರು ಪೋಲೀಸ್ ಠಾಣೆಗೆ ಹೋದೆವು. ಚಾಸಾ.1 ರವರು ಈ ಬಗ್ಗೆ ದೂರು ಸಲ್ಲಿಸಿದರು. ಪೋಲೀಸರು ನಮ್ಮನ್ನು ಠಾಣೆಯಲ್ಲಿ ವಿಚಾರಿಸಿದರು. ನಾವು ಪೋಲೀಸರಲ್ಲಿ ನಡೆದ ವಿಚಾರ ತಿಳಿಸಿದೆವು.

09. ಘಟನೆ ನಡೆದಾಗ ಅಲ್ಲಿಗೆ ಬಂದ ಮೂವರು ವ್ಯಕ್ತಿಗಳನ್ನು ನಾನು ನೋಡಿದ್ದೇನೆ. ಬೈಕಿನಲ್ಲಿ ಬಂದ ಮೂರು ಜನರ ಪೈಕಿ ಈಗ

ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಕೂಡ ಇದ್ದ. ಸಾಕ್ಷಿಯು 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ದೂರು ಸಲ್ಲಿಸಿದ ಮೂರು ದಿನಗಳ ನಂತರ ಪೋಲೀಸರು ಏಳು ಜನರನ್ನು ದಸ್ತಗಿರಿ ಮಾಡಿರುವುದಾಗಿ ತಿಳಿಸಿದರು. ನಾವು, ಚಾಸಾ.1 ಮತ್ತು 7 ರವರು ಠಾಣೆಗೆ ಹೋದೆವು. ಠಾಣೆಯಲ್ಲಿ ಒಟ್ಟು ಏಳು ಜನ ವ್ಯಕ್ತಿಗಳು ಇದ್ದರು. ಪೋಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿದ್ದಾರೆ.

10. ನಾವು ಪ್ರಯಾಣಿಸುತ್ತಿದ್ದ ನಮ್ಮ ಸಂಸ್ಥೆಯ ಗೂಡ್ಸ ವಾಹನದ ಭಾವಚಿತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದೆ. ಮೇಲೆ ಹೇಳಿದ ಘಟನೆ ನಡೆದ ಸ್ಥಳದ ಭಾವಚಿತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.07 ಎಂದು ಗುರುತಿಸಲಾಗಿದೆ.

11. ಮೇಲೆ ಹೇಳಿದ ಕೃತ್ಯಕ್ಕೆ ಬಳಸಿದ ಸ್ವತ್ತುಗಳು ಹಾಗೂ ನಮ್ಮ ವಾಹನದ ಒಡೆದ ಗಾಜಿನ ಚೂರುಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 4 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ</u>

ಆರೋಪಿ ಪರ ವಕೀಲರು ಕಲಂ.231(2) ರಡಿಯಲ್ಲಿ ಅರ್ಜಿ ಸಲ್ಲಿಸಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಮಂಜುನಾಥ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ